ಪೋಲೀಸರು ತದನಂತರ ವರ್ತಿಸಿದ ಕಾರ್ಯವು ನ್ಯಾಯಸಮ್ಮತವಲ್ಲ" ಎಂದು ತಿಳಿಸಿರುವ ಮೇರೆಗೆ ಈ ಬಗ್ಗೆ ಬಂಧಿತ ವ್ಯಕ್ತಿಗಳೊಂದಿಗೆ ವರ್ತಿಸುವಾಗ ಹೆಚ್ಚು ಮಾನವೀಯತೆಯಿಂದ ಮತ್ತು ಸಂಯಮದಿಂದ ವರ್ತಿಸಲು ಪೋಲೀಸ್ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

**ನ್ಯಾಯಮೂರ್ತಿ ಎನ್.ಡಿ.ವಿ. ಭಟ್ ವಿಚಾರಣಾ ಆಯೋಗ**

ದಿನಾಂಕ 14.11.95ರಂದು ಬೆಂಗಳೂರಿನ ದೇವರಜೀವನಹಳ್ಳಿಯ ಡಾ: ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಡಾ: ಅಂಬೇಡ್ಕರ್ ಪ್ರತಿಮೆಯನ್ನು ಅಪಮಾನಗೊಳಿಸಿದ ಬಗ್ಗೆ ವಿಚಾರಣೆ ನಡೆಸಲು ದಿನಾಂಕ 2.2.96 ರಂದು ಈ ವಿಚಾರಣಾ ಆಯೋಗವನ್ನು ರಚಿಸಲಾಯಿತು. ಈ ವಿಚಾರಣಾ ಆಯೋಗವು ಸರ್ಕಾರಕ್ಕೆ ತನ್ನ ವರದಿಯನ್ನು ದಿನಾಂಕ 28.2.97 ರಂದು ಸಲ್ಲಿಸಿತು. ಈ ವಿಚಾರಣಾ ಆಯೋಗದ ವರದಿಯನ್ನು ಒಪ್ಪಿಕೊಂಡು ವರದಿಯಲ್ಲಿ ಸೂಚಿಸಿರುವ ವಿದ್ಯಾರ್ಥಿಗಳ ವಿರುದ್ಧ ಕ್ರಮವೇನೂ ಕೈಗೊಳ್ಳದಿರಲು ಸರ್ಕಾರವು ತೀರ್ಮಾನಿಸಿತು.

**ಶ್ರೀ ಎನ್. ಎಸ್. ಸಂಗೋಳ್ಳಿ ವಿಚಾರಣಾ ಆಯೋಗ**

ವೀರಪ್ಪನ್ ಸಹಚರರಾದ ಆರ್ಜುನನ್, ಅಯ್ಯನ್ ದೊರೈ ಮತ್ತು ರಂಗಸ್ವಾಮಿ ಇವರುಗಳ ಸಾವಿನ ಕುರುತು ವಿಚಾರಣೆ ನಡೆಸಲು ದಿನಾಂಕ 4.4.96 ರಂದು ಈ ವಿಚಾರಣಾ ಆಯೋಗವನ್ನು ರಚಿಸಲಾಯಿತು. ಈ ವಿಚಾರಣಾ ಆಯೋಗವು ದಿನಾಂಕ 31.1. 97ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಮೇಲ್ಕಂಡ ಮೂರು ಜನರ ಮರಣವು ಆತ್ಮಹತ್ಯೆಯಾಗಿರುತ್ತದೆ ಮತ್ತು ಈ ಘಟನೆಗೆ ಸಂಬಂಧಿಸಿದಂತೆ ಎಸ್ಕಾರ್ಟ್ ಪಾರ್ಟಿಯವರ ನಿರ್ಲಕ್ಷ್ಯ ಅಥವಾ ಲೋಪ ಇರಲಿಲ್ಲವೆಂದು ವಿಚಾರಣಾ ಆಯೋಗವು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತದೆ. ಸರ್ಕಾರವು ಈ ವಿಚಾರಣಾ ಆಯೋಗದ ವರದಿಯನ್ನು ಒಪ್ಪಿಕೊಂಡಿರುತ್ತದೆ.

**ಸಾರ್ವಜನಿಕರಿಗೆ ಪಡಿತರ ಚೀಟಿ ವಿತರಣೆ**

2063 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸಾರ್ವಜನಿಕರಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಬೇಕಾಗಿರುವ ದಾಖಲಾತಿಗಳು ಯಾವುವು?*

2) *ಪಡಿತರ ಚೀಟಿ ನೀಡಲು ಕಡಿತ ಪ್ರಮಾಣ ಪತ್ರ : ಅದ್ಯರ್ಪಣಾ ಪ್ರಮಾಣ ಪತ್ರ ನೀಡುವಂತೆ ತಿಳಿಸಿರುತ್ತಿರುವುದು ನಿಜವೇ?*

3) *ಸರ್ಕಾರ ಅನಗತ್ಯ ದಾಖಲಾತಿಗಳನ್ನು ಪಡೆಯದೇ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮಕೈಗೊಳ್ಳುವುದೇ?*

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 1) ರೂ. 2.00 ಕೋರ್ಟು ಫೀ ಸ್ಟಾಂಪ್‌ನೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ನೀಡಬೇಕು.

2) 2 ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ.

3) ಸ್ವಂತ ಮನೆಯಾಗಿದ್ದರೆ ತೆರಿಗೆ ಸಂದಾಯದ ರಶೀಧಿ, ಬಾಡಿಗೆ ಮನೆಯಾಗಿದ್ದಲ್ಲಿ ಬಾಡಿಗೆ ಕರಾರು ಪತ್ರ ಅಥವಾ ಮನೆ ಮಾಲೀಕರಿಂದ ಪಡೆದ ಪತ್ರ.

4) ಮತದಾರರ ಪಟ್ಟಿಯ ಪ್ರತಿ.

5) ಪಡಿತರ ಚೀಟಿಯಿಂದ ಅಥವಾ ಹೆಸರು ತೆಗೆದ ಬಗ್ಗೆ ಕಡಿತ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿಯನ್ನು ಅದ್ಯರ್ಪಣಾ ಮಾಡಿದ ಬಗ್ಗೆ ಪ್ರಮಾಣ ಪತ್ರ ಅಥವಾ ತಹಸೀಲ್ದಾರರಿಂದ ಪಡಿತರ ಚೀಟಿ ಪಡೆದಿಲ್ಲವೆಂಬುದರ ಬಗ್ಗೆ ಧೃಢೀಕರಣ ಪತ್ರ.

ಆ) ಹೌದು.

ಇ) ಪಡಿತರ ಚೀಟಿಗಳನ್ನು ವಿತರಣೆ ಮಾಡಲು ನಿಗಧಿ ಪಡಿಸಿರುವ ದಾಖಲಾತಿಗಳು ಅರ್ಜಿದಾರರ ನಿಜಾಂಶವನ್ನು ತಿಳಿಯಲು ಹಾಗೂ ಇಲಾಖೆಯಿಂದ ವಿತರಿಸುವ ಪಡಿತರ ಚೀಟಿಗಳ ನಿಖರತೆಯನ್ನು ತಿಳಿಯಲು ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ದಾಖಲಾತಿಗಳು ಅಗತ್ಯವಾಗಿರುತ್ತವೆ.

**ಸ್ವಾತಂತ್ರ್ಯೋತ್ಸವ 50ನೇ ವರ್ಷದ ಅಂಗವಾಗಿ ಮಹಿಳಾ ಖೈದಿಗಳ ಬಿಡುಗಡೆ.**

2064 - ಶ್ರೀಮತಿ ಹೇಮಾವತಿ (ಶಾಂತಿನಗರ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸ್ವಾತಂತ್ರೋತ್ಸವದ 50ನೇ ವರ್ಷದ ಅಂಗವಾಗಿ ರಾಜ್ಯದ ವಿವಿಧ ಕಾರಾಗೃಹಗಳಿಂದ ಎಷ್ಟು ಜನ ಖೈದಿಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.*

*ಆ) ಅವರುಗಳಲ್ಲಿ ಮಹಿಳಾ ಖೈದಿಗಳ ಸಂಖ್ಯೆ ಎಷ್ಟು?*

*ಇ) ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಖೈದಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ಪರಿಶೀಲಿಸುತ್ತದೆಯೇ?*

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) 12 ವರ್ಷ ವಾಸ್ತವಿಕ ಸಜೆ ಅನುಭವಿಸಿದ 37 ಜನ ಜೀವಾವಧಿ ಶಿಕ್ಷೆ ಅನುಭವಿಸಿದ ಖೈದಿಗಳನ್ನು ಸನ್ಮಾನ್ಯ ರಾಜ್ಯಪಾಲರಿಂದ ಕ್ಷಮಾಧಾನ ದೊರಕಿಸಿ ಬಿಡುಗಡೆ ಮಾಡಲು ಪರಿಶೀಲಿಸಲಾಗುತ್ತಿದೆ.